**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 26.06.2021.

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 173/2021 ಕಲಂ: 283, 279, 304(ಎ) ಐಪಿಸಿ**

ದಿನಾಂಕ 24.06.2021 ರಂದು 19.30 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಬೀಮು ತಂ ಮೇಘು ರಾಠೋಡ ಸಾ॥ ಹಡಗಲಿ ತಾಂಡಾ ನಂ 1 ಟ್ರ್ಯಾಕ್ಟರ ನಂಬರ ಕೆಎ:28 ಟಿಬಿ:0843 ನೇದ್ದಕ್ಕೆ ಹಿಂದೆ ಹಚ್ಚಿದ ನಂಬರ ಇರಲಾರದ ಟ್ರ್ಯಾಲಿ 2] ರಾಮಣ್ಣ ತಂ ಮಹಾದೇವಪ್ಪ ಗಂಟೆಪ್ಪಗೋಳ ವಯಾ 35 ವರ್ಷ ಸಾ॥ ಧನ್ಯಾಳ ಮೋಟರ ಸೈಕಲ್ ನಂಬರ ಕೆಎ:28 ಎಚ್ಎ:1910 ನೇದ್ದರ ಚಾಲಕ, ರಾಮಣ್ಣ ಸಾ॥ ಧನ್ಯಾಳ ಇವನು ತನ್ನ ಮೋಟರ ಸೈಕಲ್ ನೇದ್ದನ್ನು ತಗೆದುಕೊಂಡು ಸಿಂದಗಿ ಕಡೆಗೆ ಹೋಗುವ ಸಲುವಾಗಿ ಮೋಟರ ಸೈಕಲ್‌ವನ್ನು ಅತೀ ಜೋರಾಗಿ ಮತ್ತು ನಿಸ್ಕಾಳಜಿಯಿಂದ ನಡೆಯಿಸಿಕೊಂಡು ಹೋಗಿ ರಸ್ತೆಯ ಸಂಚಾರಕ್ಕೆ ಅಡತಡೆ ಆಗುವಂತೆ ನಿಲ್ಲಿಸಿದ ಟ್ರ್ಯಾಕ್ಟರ ನಂ ಕೆಎ:28 ಟಿಬಿ:0843 ನೇದ್ದಕ್ಕೆ ಹಿಂದೆ ಹಚ್ಚಿದ ನಂಬರ ಇರಲಾರದ ಟ್ರ್ಯಾಲಿಗೆ ಹಾಯಿಸಿ ಅಪಘಾತ ಮಾಡಿ ತನ್ನ ಹಣೆಗೆ ಹಾಗೂ ತೆಲೆಗೆ ಭಾರಿ ಸ್ವರೂಪದ ಗಾಯ ಪೆಟ್ಟು ಪಡಿಸಿಕೊಂಡು ಮೃತನಾಗಿದ್ದು ಇರುತ್ತದೆ. ಈ ಬಗ್ಗೆ ಬಸವರಾಜ ಮಹಾದೇವಪ್ಪ ಗಂಟೆಪ್ಪಗೋಳ ಸಾ॥ ಧನ್ಯಾಳ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 25.06.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಚಡಚಣ ಪೊಲೀಸ ಠಾಣೆ ಗುನ್ನಾ. ನಂ: 59/2021 ಕಲಂ: 15[ಎ], 32[3] ಕೆ.ಇ ಆ್ಯಕ್ಟ.**

ದಿನಾಂಕ 25.06.2021 ರಂದು 17.00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ವಿಠೋಬಾ ಗೋಪಾಲ ಕಸಮೂಳೆ ವಯಾ॥ 28 ವರ್ಷ ಸಾ॥ ಉಮರಾಣಿ ತಾ॥ ಚಡಚಣ ಈತನು ಸರ್ಕಾರದಿಂದಾಗಲಿ ಅಥವಾ ಸಂಬಂಧಿಸಿದ ಇಲಾಖೆಯಿಂದಾಗಲಿ ಯಾವುದೆ ಲೈಸನ್ಸ್ ವ, ಪರವಾಣಿಗೆಯನ್ನು ಪಡೆಯದೆ ತನ್ನ ಮನೆಯ ಮುಂದೆ ಇರುವ ಸಾರ್ವಜನಿಕ ಖುಲ್ಲಾ ಜಾಗೆಯಲ್ಲಿ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟು ಅಪರಾಧ ಈ ಬಗ್ಗೆ ಸ:ತ: ಎಂ. ಎ. ಸತಿಗೌಡರ ಪಿ.ಎಸ್.ಐ, ಚಡಚಣ ಪಿ.ಎಸ್. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 25.06,2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಬ ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 103/2021 ಕಲಂ: 341, 326, 504, 506 ಐ.ಪಿ.ಸಿ,**

ದಿನಾಂಕ 23.06.2021 ರಂದು 21:00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 1] ಮುತ್ತಪ್ಪ ಕಂಠೆಪ್ಪ ಕೋಗಿಲ ಸಾ: ಸಾಸನೂರ ತಾ: ತಾಳಿಕೋಟಿ. ಪಿರ್ಯಾದಿ ಮತ್ತು ಆರೋಪಿತನು ಒಂದೆ ಜಾತಿಯವರಿದ್ದು, ಪಿರ್ಯದಿಯ ಮತ್ತು ಅವಳ ಅಣ್ಣ ಗಾಯಾಳು ಮಲ್ಲಪ್ಪ ತಂದೆ ಶರಣಪ್ಪ ದ್ಯಾಮಗೊಂಡ ಇತನು ಕೂಡಿ ತಮ್ಮ ಸಂಬಂದಿಕರಾರ ಬಾಲಪ್ಪ ಕರೆಪ್ಪ ದ್ಯಾಪೂರ ಇವರ ಮನೆಗೆ ಹೋಗಿದ್ದು ಇವರ ಮನೆಯ ಪಕ್ಕದಲ್ಲಿ ಇರುವ ಆರೋಪಿತನು ತನ್ನ ಮನೆಯಲ್ಲಿ ತನ್ನ ಹೆಂಡತಿಯೊಂದಿಗೆ ಜಗಳಾ ಮಾಡುತ್ತಿದ್ದಾಗ ಪಿರ್ಯಾದಿಯ ಅಣ್ಣ ಮಲ್ಲಪ್ಪ ತಂದೆ ಶರಣಪ್ಪ ದ್ಯಾಮಗೊಂಡ ಇತನು ನಿನ್ನ ಹಂಡತಿ ಹೆಣ್ಣುಮಗಳೊಂದಿಗೆ ಯಾಕೆ ಜಗಳಾ ಮಡುತ್ತಿ ಅಂತ ಕೇಳಲು ಸಿಟ್ಟಾದ ಆರೋಪಿತನು ನನ್ನ ಹೆಂಡತಿಯ ಜಗಳಾ ಕೇಳಲಾಕ ನೀನು ಯಾರೋ ಮಗನಾ ಅಂತ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತ ತೆಕ್ಕಿಗೆ ಬಿದ್ದು, ಕೆಳಗೆ ನೆಲಕ್ಕೆ ಕೆಡವಿ ತಲೆಗೆ ಕಲ್ಲಿನಿಂದ ಹೊಡೆದು ಭಾರಿ ಗಾಯ ಪೆಟ್ಟು ಪಡಿಸಿದ್ದು ಈ ಬಗ್ಗೆ ರೇಣುಕಾ ಗಂಡ ಶಿವಪ್ಪ ಹಟ್ಟಿ ಸಾ: ಸಾಸನೂರ ತಾ: ಬಸವನ ಬಾಗೇವಾಡಿ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 25.06,2021 ರಂದು ಬ ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.